ದಿನಾಂಕ **20-11-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು ಃ ಶ್ರೀ ಆರ್ ಬಿ ಸಿ ಪ್ರತಿವಾದಿ ಪರ ವಕೀಲರಿಂದ -

ನಾನು ಶಾಲೆ ಕಲಿತಿಲ್ಲ. ಈ ದಾವೆಯನ್ನು ನನ್ನ ಅತ್ತೆ ಮತ್ತು ಭಾವನ ಮೇಲೆ ಪಾಲು ಕೋರಿ ಹೂಡಿರುತ್ತೇನೆ. 6 ಎಕರೆ ಆಸ್ತಿ ಮೇಲೆ ದಾವೆ ಮಾಡಿರುತ್ತೇನೆ. 6 ಎಕರೆ ಆಸ್ತಿಯ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. 6 ಎಕರೆ ಆಸ್ತಿಯನ್ನು ಹೊರತು ಪಡಿಸಿ ಬೇರ ಆಸ್ತಿಗಳ ಮೇಲೆ ದಾವೆ ಮಾಡಿರುವುದಿಲ್ಲ. ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮೂಲ ಹೆಸರು ಕಲ್ಲವ್ವಾ ಸಿದ್ದಪ್ಪ ಬೆಂಡವಾಡಿ ಸಾಃ ಅರಳಿಕಟ್ಟಿ ಎಂದರೆ ಸರಿ . ನನ್ನನ್ನು ಚಿಕ್ಕೋಡಿ ತಾಲೂಕಿನ ಬೆಂಡವಾಡಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನಗೆ ಸಂಬಂಧಿಸಿದ ಚುನಾವಣಾ ಗುರುತಿನ ಚೀಟಿ ಮತ್ತು ಆಧರ ಕಾರ್ಡನ್ನು ಹಾಜರ ಪಡಿಸಿರುತ್ತೇನೆ. ಅದರಲ್ಲಿ ನನ್ನ ಹೆಸರು ಕಲ್ಲವ್ವ ಮಲ್ಲಪ್ಪ ಅಂಕಲಗಿ ಎಂದು ನಮೂದು ಇರುತ್ತದೆ. ಕರಗುಪ್ಪಿಗೆ ಮದುವೆ ಮಾಡಿ ಕೊಟ್ಟು ಸುಮಾರು 28 ವರ್ಷಗಳಾಗಿರುತ್ತವೆ. ನನಗೆ ನನ್ನ ಜನ್ಮ ದಿನಾಂಕವನ್ನು ಹೇಳಲು ಬರುವುದಿಲ್ಲ. ಬೆಂಡವಾಡ ಗ್ರಾಮದಲ್ಲಿ ನನಗೆ ಒಬ್ಬ ಗಂಡು ಮಗ ಇರುತ್ತಾನೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಬೆಂಡವಾಡ ಗ್ರಾಮದಲ್ಲಿ ನನಗೆ ಗಂಡು ಮಗ ಇರುವುದಿಲ್ಲ ಎಂದು ನುಡಿಯುತ್ತಾರೆ. ಬೆಂಡವಾಡ ಗ್ರಾಮದಲ್ಲಿ ನಾನು ಸೋಡಪತ್ರ ಮಾಡಿಕೊಂಡು ಬಂದಿರುವುದಿಲ್ಲ.

ಅರಳಿಕಟ್ಟಯಲ್ಲಿ ಮದುವೆ ಆಗಿದೆ ಎಂದು ಹೇಳುವ ಸಮಯದಲ್ಲಿ ಯಾರು ಸ್ವಾಮಿಜಿ ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಮದುವೆ ಆಗುವ ಪೂರ್ವದಲ್ಲಿ ಮದುವೆ ನಿಶ್ಚಯ ಆದಾಗ ಮದುವೆ ಯಾದಿ ಬರೆಯುತ್ತಾರೆ ಎಂದರೆ

ಸರಿ . ಅದಕ್ಕೆ ಎರಡೂ ಗ್ರಾಮದ ಪಂಚರು ಸಹಿ ಮಾಡುತ್ತಾರೆ ಎಂದರೆ ಸರಿ .ಮದುವೆ ಆಗಿದೆ ಎಂದು ಹೇಳುವ ಕಾಲಕ್ಕೆ ಫೋಟೊ ತೆಗೆದಿರುತ್ತಾರೆ. ಅದೇ ಪ್ರಕಾರ ಲಗ್ನ ಪತ್ರಿಕೆಯನ್ನು ಹಾಕಿಸಿರುತ್ತಾರೆ ಎಂದರೆ ಸರಿ . ಅರಳಿಕಟ್ಟಿಯಲ್ಲಿ ಮದುವೆ ಆಗಿದೆ ಎಂದು ತೋರಿಸಲು ಲಗ್ನ ಯಾದಿ , ಲಗ್ನ ಪತ್ರಿಕೆ ಮತ್ತು ಫೊಟೊಗಳನ್ನು ಹಾಜರ ಪಡಿಸಿರುತ್ತೇನೆ. ನಾನು ಮತದಾನವನ್ನು ಕರಗುಪ್ಪಿ ಯಲ್ಲಿ ಮಾಡುತ್ತೇನೆ. ಕರಗುಪ್ಪಿಯಲ್ಲಿ ನಾನು ಮತದಾನ ಮಾಡುತ್ತೇನೆ ಎಂದು ತೋರಿಸಲು ಮತದಾರರ ಪಟ್ಟಿಯನ್ನು ಹಾಜರ ಪಡಿಸುತ್ತೇನೆ. ಮದುವೆ ಸಮಯಲ್ಲಿ ಪಂಚರಾಗಿ ಅಪ್ಪಯ್ಯ ಭೀಮಗೌಡ ಪಾಟೀಲ , ಕೆಂಚಗೌಡ ಭೀಮಗೌಡ ಪಾಟೀಲ ಮತ್ತು ಇನ್ನಿತರರು ಇದ್ದರು. ಕರಗುಪ್ಪಿ ಯ ಪಂಚರ ಹೆಸರು ನನಗೆ ಗೊತ್ತಿಲ್ಲ. ಮದುವೆ ಸಮಯದಲ್ಲಿ ಸುರಗಿ ಸುತ್ತಿದ , ಅರಿಷಿಣ ಕಾರ್ಯಕ್ರಮದಲ್ಲಿ ತೆಗೆದ ಛಾಯಾ ಚಿತ್ರವನ್ನು ಹಾಜರ ಪಡಿಸುತ್ತೇನೆ. ಮದುವೆಗೆ ಸುಮಾರು 500 ಜನ ಸೇರಿದ್ದರು. ಮದುವೆ ಅರಳಿಕಟ್ಟಿಯ ಲಕ್ಷ್ಮಿದೇವಿ ಗುಡಿಯಲ್ಲಿ ಆಗಿರುತ್ತದೆ. ಅಲ್ಲಿ ಕಲ್ಯಾಣ ಮಂಟಪ ಇರುವುದಿಲ್ಲ.

**( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ